ಕಥೆ ಹೇಳುತ್ತೀ' ಅನ್ನುತ್ತ ಧರ್ಮ ಬಕೆಟ್‌ನಲ್ಲಿದ್ದ ತನ್ನ ಅಂಗಿಯನ್ನು ತೆಗೆದು ತಾನೇ ಉಜ್ಜತೊಡಗಿದ.

'ಎಲ್ಲಿ ಒಬ್ಬಳೇ ಇದ್ದೇನೆ, ಇಲ್ಲೇ ಪಕ್ಕದಲ್ಲಿ ನಮ್ಮ ಭತ್ತದ ಗದ್ದೆ ನೋಡಿಕೊಳ್ಳುವ ಮಾಯಿಶೀನ ಇದ್ದಾರಲ್ಲ' ಅಂತ ಧರ್ಮನನ್ನು ಸಮಾಧಾನ ಗೊಳಿಸಲು ನೋಡಿದಳು.

'ಮಾಯಿಶೀನ ಅಂದ್ರೆ ಯಾರಜ್ಜೀ? ಇಲ್ಲೇ ಇರುತ್ತಾರಾ? ಎಲ್ಲಿಂದ ಬಂದಿದ್ದಾರೆ?' ಅಂತೆಲ್ಲ ಕುತೂಹಲದಿಂದಲೇ ವಿಚಾರಿಸಿದ ಧರ್ಮ. ಅದಕ್ಕೆ ಅಜ್ಜಿ 'ಹೌದು ನಿನ್ನ ದೊಡ್ಡಪ್ಪ ಅವರನ್ನು ಭತ್ತದ ಗದ್ದೆಯ ಕೆಲಸಕ್ಕೆ ನೇಮಿಸಿದ್ದಾನೆ, ಆ ಕಡೆ ಘಟ್ಟದ ಮೇಲಿನವರು' ಅಂದಳು.

'ಮಾಯಿಶೀನ ಅಂತ ಆ ಅಂಕಲ್ ಹೆಸರಾ ಅಜ್ಜೀ?' ಅಂತ ಧರ್ಮ ಎಡಬಿಡದೇ ಪ್ರಶ್ನೆಗಳ ಸುರಿಮಳೆಗೈದರೆ ಅಜ್ಜಿಗೆ ಉತ್ತರಿಸಲು ಒಂದಿಷ್ಟೂ ಬೇಸರವಿಲ್ಲ.

'ಮಾಯಿ ಅಂತ ಆ ಆಂಟಿಯ ಹೆಸರು, ಶೀನ ಅಂದರೆ ಆ ಅಂಕಲ್ಲು, ಇಲ್ಲಿ ಭಾಳ ಜನ ಶೀನ, ಶೀನಣ್ಣಗಳು ಇರೋದ್ರಿಂದ ಇವನನ್ನು ಮಾಯಿಶೀನ ಅಂತಲೇ ಎಲ್ಲರೂ ಕರೀತಾರೆ' ಅಂದಳು.

ತನ್ನ ನೂರಾರು ಪ್ರಶ್ನೆಗಳಿಗೆ ಉತ್ತರಿಸಲು ಅಜ್ಜಿಯ ಜೊತೆಗೆ ಇನ್ನೂ ಇಬ್ಬರು ಇಲ್ಲಿರುವುದು ಕಂಡು ಧರ್ಮನಿಗೆ ಖುಷಿಯೇ ಆಯಿತು.

ಧರ್ಮ ತನ್ನ ಪುಟಾಣಿ ಕೈಗಳಿಂದ ಬಟ್ಟೆ ತೊಳೆಯಲು ತನಗೆ ಸಹಾಯ ಮಾಡುತ್ತಿದ್ದುದನ್ನು ಅಜ್ಜಿ ಅಕ್ಕರೆ ತುಂಬಿ ವೀಕ್ಷಿಸಿದಳು. ಪ್ರತೀ ವರ್ಷದಂತೆ ಊರಿನಲ್ಲಿಯ ಜಾತ್ರೆಯ ದಿನ ಬಂತು. ಭೀಮಜಿ ದೊಡ್ಡಪ್ಪ ಬಂದರು. 'ಊರಲ್ಲಿ ದೇವೀ ಜಾತ್ರೆ, ನಮ್ಮನೆಯಲ್ಲಿ ನನ್ನ ಧರ್ಮನ ಜಾತ್ರೆ' ಅಂತ ಧರ್ಮನನ್ನು ಎತ್ತಿ ಮುದ್ದಾಡಿದರು. ಮನೆಯಲ್ಲಿ ಸಂಭ್ರಮ ತುಂಬಿತು. ಮಾಯಿ ಮತ್ತು ಶೀನಣ್ಣನೇ ಓಡಿ ಬಂದು ಎಲ್ಲರಿಗೂ ನಿಂಬೆ ಹಣ್ಣಿನ ಪಾನಕ ಮಾಡಿ ಕೊಟ್ಟರು. ಮತ್ತು ಅವರೇ ಸಂಜೆಯ ಬಾಡೂಟಕ್ಕೂ ತಯಾರಿ ನಡೆಸಿದರು.

'ಏನಮ್ಮಾ, ಭಾಳ ಇಳಿದುಹೋಗಿದ್ದೀ' ಅಂತ ದೊಡ್ಡಪ್ಪ ತನ್ನ ಅಮ್ಮನನ್ನು ಕಾಳಜಿಯಿಂದ ವಿಚಾರಿಸಿ ಕೊಂಡರು. ಅಜ್ಜಿ, 'ಹಾಗೇನಿಲ್ಲ, ನಾನಿರೋದೇ ಹೀಗೆ' ಅಂತ ದೊಡ್ಡಪ್ಪನ ಮಾತನ್ನು ಅಲ್ಲಗಳೆದಳು. ಆಗ ಧರ್ಮನೇ 'ಹೌದು ದೊಡ್ಡಪ್ಪ, ಅಜ್ಜಿಗೆ ನೀರು ಜಗ್ಗಿ ಬಟ್ಟೆ ತೊಳೆಯಲು ಭಾಳ ಕಷ್ಟವಾಗ್ತಿದೆ' ಅಂದ.

ದೊಡ್ಡಪ್ಪ ಧರ್ಮನನ್ನು ತೊಡೆಯಲ್ಲಿ ಕೂರಿಸಿ ಕೊಂಡು 'ಹೌದಪ್ಪ, ನಿನ್ನಜ್ಜಿ ಹಟಮಾರಿ, ನಾವು ಹೇಳಿದ ಮಾತೇ ಕೇಳುವುದಿಲ್ಲ' ಅನ್ನುತ್ತ ಮುನಿಸು ತೋರುತ್ತಲೇ ಥಟ್ಟನೆ ಮಾಯಿಶೀನರನ್ನು ಕರೆದರು,

'ಭತ್ತದ ಗದ್ದೆ ಕೆಲಸ ಮುಗಿದ ನಂತರ ಇಬ್ಬರೂ ಎಲ್ಲಿ ಕೆಲಸಕ್ಕೆ ಹೋಗುತ್ತೀರಿ?' ಕೇಳಿದರು ದೊಡ್ಡಪ್ಪ.

ಮಾಯಿ 'ನಾನು ಅಂಗನವಾಡಿಗೆ ಅಡುಗೆ ಮಾಡಲು ಹೋಗ್ತೇನೆ ಅಣ್ಣ' ಅಂದಳು. ಮಾಯಿಶೀನ 'ನಾನು ಸದ್ಯ ಖಾಲಿ ಇದ್ದೇನೆ ಅಣ್ಣಾ' ಅಂದ.

ದೊಡ್ಡಪ್ಪನಿಗೆ ಖುಷಿಯಾಯ್ತು, 'ಹಾಗಾದ್ರೆ ಅಮ್ಮನಿಗೆ ಸಹಾಯ ಮಾಡಲು ಬಾ ನಾಳೆಯಿಂದ, ಚೊಲೋ ಸಂಬಳ ಕೊಡ್ತೇನೆ' ಅಂದರು ದೊಡ್ಡಪ್ಪ,

'ಅಂದ್ರೆ ಅಮ್ಮನಿಗೆ ಯಾವ ಕೆಲಸಕ್ಕೆ ಸಹಾಯಕ್ಕೆ ಬರಲಣ್ಣಾ?' ಅಂತ ಕೇಳಿದ ಮಾಯಿಶೀನ. 'ಎಲ್ಲಾ

